# ಏರಾಏರಿ ಚಕ್ಕಡಿ ಬಂಡಿ

ಎತ್ತಿಲ್ಲದ ಎತ್ತಿನ ಬಂಡಿ, ನಮಗೆಲ್ಲ ಆಟ ದಂಡಿ
ಕೇಳುವರ್‍ಯಾರು ನಮ್ಮ, ಇಲ್ಲಿಂದಲೇ ಎಲ್ಲಾ ತಿಂಡಿ;
ಎಲ್ಲರೂ ಎಲ್ಲಿ, ಬನ್ನಿ ಬನ್ನಿ, ರಂಗ, ರಂಗಿ, ಕಮಲಿ, ಮಲ್ಲಿ
ಪಾಠದ್ದೇನೂ ಇಲ್ಲ ಕಾಟ, ಆಟ, ಊಟ ಎಲ್ಲಾ ಇಲ್ಲಿ

ಏರಾ ಏರಿ ಚಕ್ಕಡಿ ಬಂಡಿ, ಏನೇಆದ್ರೂ ಬೀಳಲ್ಲ ಜಾರಿ
ಕೆಂಪು ನೀಲಿ ಹಲಿಗೆ ಪಟ್ಟಿ ಹತ್ತಿ ಇಳಿದು ಕುಣಿದು ಹಾರಿ
ಅಮ್ಮ ಅಪ್ಪ, ತೋಟ, ಗದ್ದೆ ನಮಗ್ಯಾಕದರ ಪರಿವೆ
ದುಡಿದು ತರಿದು ಅಗೆದು ಬನ್ನಿ, ಇಲ್ಲಿ ಎಲ್ಲ ಮರೆವೆ

ಇಲ್ಲವಲ್ಲ ನಮ್ಮ ಹತ್ರ ಲೆಗೊ ಟಾಯ್ಸ್, ಕಂಪ್ಯೂಟರ್ ಗೇಮ್ಸ್
ಮುರಿದ ಗಾಡಿ ಚಕ್ಕಡಿ ಬಂಡಿ, ಬಿಟ್ರೆ ಏನಿದೆ ಚಾಯ್ಸ್
ಚಿಂತೆ ಇಲ್ಲ ಹೋಂವರ್ಕ್, ಆನ್‌ಲೈನು, ಟ್ಯೂಷನ್ನು
ದೂರ ದೂರ ಕಾಣದ ಕನಸಿನರಮನೆಗೆ ಹೋಗುವ ಬೇಗಿನ್ನು

● **ಕುಸುಮ್ ಗೋಪಿನಾಥ್**



# ಕೊರೊನಾ ಕಾಲದಲ್ಲಿ

ಯಾಕ್ ಹಾಂಗ್ ನೋಡ್ತೀರಿ
ನಮ್‌ಗೀಗ್ ಸೂಟಿ ಐತಲ್ರೀ
ನಮ್ ಹಳ್ಳೀಲಿಲ್ಲ ಲಾಕ್‌ಡೌನು
ಸುತ್ತ ಎಲ್ಲೂ ಇಲ್ಲ ಕ್ವಾರಂಟೈನು.

ಆಡಕ್ ಮಂದಿ ಸಿಗ್ತಾರಿ
ಬಂಡಿ, ಲಗೋರಿ, ಬಗರಿ
ಮರಕೋತಿ ಆಟಾನು ಗೊತ್ತೈತ್ರೀ
ಏತ–ಪೇತಾ ಆಡ್ಲಿಕ್ಕೂ ಜತಿ ಐತ್ರೀ.

ಹಾಡಿನ ಬಂಡೀನ ಹತ್‌ತೇವಿ
ಹಳಗುಣಿ ಮನೀನ ತುಂಬ್‌ತೇವಿ
ಹೂವಿನ್ ಚೆಂಡನ್ನ ಎಸಿತೇವಿ
ಹಾರೋ ಚಿಟ್ಟೇನ್ನ ಹಿಡಿತೇವಿ.

ಖೋ ಖೋ, ಕಬಡ್ಡಿ, ವಾಲೀಬಾಲು
ಗೋಲಿ, ಗಜ್ಜುಗ, ಚಿಣ್ಣೀಕೋಲು
ಕ್ರಿಕೆಟ್ಟು, ಹಾಕಿ, ಫುಟ್‌ಬಾಲು
ಇಲ್ಲಿದೆ ಆಡುವ ಚಿಣ್ಣರ ಸಾಲು.

ನಮ್ಮೂರ ಕೆರೆಯಲಿ ನೀರಿನ ಆಟ
ಎಮ್ಮೆ ಸವಾರಿಯ ಚೆಂದದ ನೋಟ
ಮಾವಿನ ತೋಪಲಿ ಬುತ್ತಿಯ ಊಟ
ಬಡಿಸ್ತೇವಿ ನಿಮಗೂ, ತನ್ನಿರಿ ತಾಟ.

● **ಬೇದ್ರೆ ಮಂಜುನಾಥ**